ಶ್ರೀ ಜೆ. ಹೆಚ್. ಪಟೇಲ್.—ನಮ್ಮ ಕೊರತೆ ನಿರ್ಣಯದ ನಂತರವು ಮುಂದುವರಿಯಬಹುದು. ನಮ್ಮ ಕೊರತೆಯನ್ನು ಕಡಿಮೆ ಮಾಡುವ ಉದ್ದೇಶವೇ ಸರ್ಕಾರದ್ದು ಇನ್ನು ಯಾವ ಯಾವ ಪ್ರಾಜೆಕ್ಟ್ ಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ ಎಂದು ಕೇಳಿದಿರಿ ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಸಮರ್ಪಕವಾದ ಉತ್ತರ ಕೊಡುತ್ತೇನೆ.

ವಿದ್ಯುತ್ ಬಿಲ್‌ಗಳ ಬಾಕಿ

*೫೧೩. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಭಾರಿ ಮಂತ್ರಿ ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ವರ್ಷಕ್ಕೆ ರಾಜ್ಯದಲ್ಲಿ ವಿದ್ಯುತ್ ಮಾರಾಟದಿಂದ ಸರ್ಕಾರಕ್ಕೆ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಾರ್ಖಾನೆಗಳಿಂದ ಬಂದ ಹಣವೆಷ್ಟು ?

ಆ) ವಿದ್ಯುತ್ ಉಪಯೋಗಿಸಿ ಹಣ ಪಾವತಿ ಮಾಡದೇ ಇರುವುದರಿಂದ ಬರಬೇಕಾದ ಬಾಕಿ ಮೊತ್ತವೆಷ್ಟು ?

ಇ) ಸರ್ಕಾರಿ ಹಾಗೂ ಅರೆ ಸರ್ಕಾರಿ ಸಂಸ್ಥೆಗಳಿಂದ ಬಾಕಿ ಬರಬೇಕಾದ ಹಣದ ಮೊತ್ತವೆಷ್ಟು ? (ಸಂಸ್ಥೆವಾರು ವಿವರ ನೀಡುವುದು)

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಮಂಡಳಿಯು ವಿದ್ಯುತ್ ಮಾರಾಟದ ಬಾಬ್ತು ಖಾಸಗಿ, ಸರ್ಕಾರಿ, ಅರೆಸರ್ಕಾರಿ, ಕಾರ್ಖಾನೆಗಳು, ಕೇಂದ್ರ ಸರ್ಕಾರದ ಉದ್ಯಮಗಳು, ಸ್ಥಳೀಯ ಸಂಸ್ಥೆಗಳು ಇತ್ಯಾದಿಗಳಿಂದ ಬರುವ ಹಣದ ಲೆಕ್ಕವನ್ನು ಪ್ರತ್ಯೇಕವಾಗಿಡುವುದಿಲ್ಲ ವರ್ಗವಾರು ಗ್ರಾಹಕರಿಂದ ಬರುವ ಹಣದ ಲೆಕ್ಕ ಇಡಲಾಗುತ್ತದೆ.

ಆ) ಬಾಕಿ ಮೊತ್ತ ಸುಮಾರು ೩೮೦ ಕೋಟಿ ರೂ.ಗಳು (೩೧-೩-೮೮ರ ವೇಳೆಗೆ)

ಇ) ಸರ್ಕಾರಿ ಮತ್ತು ಅರೆ ಸರ್ಕಾರಿ ಉದ್ಯಮಗಳಿಂದ ೩೧-೩-೮೮ ರ ವೇಳೆಗೆ ಮಂಡಳಿಗೆ ಬರಬೇಕಾದ ಹಣ ಕೆಳಕಂಡಂತಿದೆ.

		ಹಣ ಕೋಟಿ ರೂ.ಗಳಲ್ಲಿ
೧)	ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ	೧೦೨.೮೨
೨)	ಭದ್ರಾವತಿ ಕಾಗದದ ಕಾರ್ಖಾನೆ	೬.೭೭
೩)	ಹುಬ್ಬಳ್ಳಿಯ ಮಹದೇವ ಬಟ್ಟೆ ಗಿರಣಿ	೦.೮೦
೪)	ಹಾಸನದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ	೦.೦೧
೫)	ಕರ್ನಾಟಕ ಮತ್ಸ್ಯ ಅಭಿವೃದ್ಧಿ ನಿಗಮ	೦.೦೪
	ಜುಮ್ಲಾ	೧೧೦.೪೪

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ೩೧-೮-೮೮ಕ್ಕೆ ಸುಮಾರು ೩೦೦ ಕೋಟಿ ರೂಪಾಯಿಗಳ ಹಣ ಬಾಕಿ ಒರಬೇಕಾಗಿರುವುದನ್ನು ತಾವು ಗಮನಿಸಿ ಕೊಂಡಿದ್ದೀರಿ. ಇದರಲ್ಲಿ ಯಾರ್ಯಾರು ಎಷ್ಟೆಷ್ಟು ಕೊಡಬೇಕೆನ್ನುವುದನ್ನು ಸಹ ತಾವು ತಿಳಿಸಿದ್ದೀರಿ ಇದರಲ್ಲಿ ಸುಮಾರು ೧೧೦ ಕೋಟಿ ರೂಪಾಯಿಗಳು ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆ ಮತ್ತು ಭದ್ರಾವತಿ ಕಾಗದದ ಕಾರ್ಖಾನೆಯದ್ದು. ಇದೆಲ್ಲಾ ಹಳೇ ಕಥೆ ಈಗ ಸುಮಾರಾಗಿ ಇನ್ನುಳಿದ ೧೯೦ ಕೋಟಿ ರೂಪಾಯಿಗಳ ಬಾಕಿ ಖಾಸಗಿಯವರಿಂದ ಬರಬೇಕಾಗಿದೆ ಎಂದು ಅರ್ಥವಾಗುತ್ತದೆ. ಈ ಖಾಸಗಿಯವರಿಂದ ಬರಬೇಕಾದ ೧೯೦ ಕೋಟಿ ರೂಪಾಯಿಗಳು ಮತ್ತು ಇನ್ನುಳಿದ ೧೧೦

ಕೋಟಿ ರೂಪಾಯಿಗಳು ಸರ್ಕಾರಿ ಮತ್ತು ಅರೆ ಸರ್ಕಾರಿ ಸಲಯಗಳಿಂದ ಬರಬೇಕಾದ ಬಾಕಿಯನ್ನು ವಸೂಲಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ? ಒಬ್ಬ ಸಾಮಾನ್ಯ ವ್ಯಕ್ತಿ ವಿದ್ಯುಚ್ಛಕ್ತಿ ಬಿಲ್ ಕಾಲಕ್ಕೆ ಸರಿಯಾಗಿ ಕೊಡದಿದ್ದರೆ ಹೇಗೆ ಅವರ ವಿದ್ಯುಚ್ಛಕ್ತಿ ಕಟ್ ಮಾಡುತ್ತೀರೋ ಹಾಗೆ ಈ ಬಾಕಿ ಉಳಿಸಿ ಕೊಂಡಿರುವವರ ವಿದ್ಯುಚ್ಛಕ್ತಿ ಸರಬರಾಜನ್ನು ಕಟ್ ಮಾಡುತ್ತೀರೋ ಹೇಗೆ ? ಒಂದು ವೇಳೆ ವಿದ್ಯುಚ್ಛಕ್ತಿ ಸರಬರಾಜು ಕಟ್ ಮಾಡದಿರುವುದಕ್ಕೆ ಏನಾದರೂ ಕಾರಣ ಇದೆಯೇ ?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರ ಪ್ರಶ್ನೆಗೆ ಇದು ಸಂಬಂಧವಿಲ್ಲ. ಆದರೂ ನಾನು ಉತ್ತರ ಹೇಳುತ್ತೇನೆ. ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಏನೆಂದರೆ ಸರ್ಕಾರಿ ಮತ್ತು ಅರೆ ಸರ್ಕಾರಿ ವಲಯದಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಎಷ್ಟು ಎಂದು ಕೇಳಿದ್ದರು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಇಲ್ಲಿ ೧೧೦ ಕೋಟಿ ರೂಪಾಯಿಗಳ ಬಾಕಿ ಇರುವಂತಹ ಕೆಲವು ಕಾರ್ಖಾನೆಗಳ ಹೆಸರನ್ನು ನಮೂದು ಮಾಡಿದ್ದೇವೆ. ಇದರಲ್ಲಿ ಇನ್ನು ಕೆಲವು ಮುನಿಸಿಪಾಲಿಟಿಗಳು, ಕಾರ್ಪೊರೇಷನ್‌ಗಳು ವಾಟರ್ ಸಪ್ಲೈ ಬೋರ್ಡ್, ಮತ್ತು ಮಂಡಲಿಗಳಿಂದ ಬರಬೇಕಾದ ಬಾಕಿ ಸಹ ಇದೆ. ಅದು ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟು ಆಗುತ್ತದೆ, ಖಾಸಗಿಯವರು ಯಾರಾದರೂ ಇದ್ದರೆ ಅವರಿಂದ ವಿದ್ಯುಚ್ಛಕ್ತಿಗೆ ವಸೂಲಿ ಮಾಡಿಲ್ಲವೆಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಬಹುಶಃ ಸಂಡೂರು ಕಾರ್ಖಾನೆ ಬಗ್ಗೆ ಅವರು ಪ್ರಸ್ತಾಪ ಮಾಡಬಹುದು. ನಾನು ಈಗಾಗಲೇ ಹೇಳಿದ್ದೇನೆ ಹಲವಾರು ಇಂತಹ ಪ್ರಕರಣಗಳು ಕೋರ್ಟಿಗೆ ಹೋಗಿದ್ದು ವಿದ್ಯುತ್ ಸರಬರಾಜು ನಿಲ್ಲಿಸಬಾರದೆನ್ನುವ ಆದೇಶ ತಂದಿದ್ದಾರೆ. ಇಂತಹ ಕಾರ್ಖಾನೆಗಳು ಕೆಲವು ಇರಬಹುದು ಅವುಗಳ ವಿವರಗಳನ್ನು ಬೇರೆ ರೀತಿಯಲ್ಲಿ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಈಗ ಒಂದು ಉದಾಹರಣೆಗೆ ಹುಕ್ಕೇರಿ ತಾಲ್ಲೂಕು ಗ್ರಾಮೀಣ ಸಹಕಾರ ಸಂಘದಿಂದ ವಿದ್ಯುಚ್ಛಕ್ತಿಗೆ ಇಲಾಖೆಗೆ ಬರಬೇಕಾದ ಬಾಕಿ ಹಣ ಬಹಳ ಇದೆ. ಕೆಲವರು ಎಲೆಕ್ಟ್ರಿಸಿಟಿ ಚಾರ್ಜ್‌ನ್ನು ಕಟ್ಟುವ ಬಗ್ಗೆ ಕೋರ್ಟಿಗೆ ಹೋಗಿದ್ದಾರೆಂದು ತಾವು ಅನಸಾಯ ಕತೆ ತೋರಿಸಿದ್ದೀರಿ ಅವರುಗಳು ಕೋರ್ಟಿಗೆ ಹೋಗಿದ್ದರೆ ನಿಮ್ಮ ಸರ್ಕಾರಿ ವಕೀಲರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆ ಎಂದು ನಾನು ಕೇಳಬೇಕಾಗುತ್ತದೆ. ಆ ರೀತಿ ನಾನು ಕೇಳಿದರೆ, ಇದು ಪ್ರಶ್ನೆಗೆ ಸಂಬಂಧಪಟ್ಟದ್ದಲ್ಲವೆಂದು ಹೇಳುತ್ತೀರಿ. ನೀವು ಈಗ ಕೊಟ್ಟಿರುವ ಲೆಕ್ಕವು ಬರೀ ಅರೆ ಸರ್ಕಾರಿ ಮತ್ತು ಸರ್ಕಾರಿ ಸಂಸ್ಥೆಗಳಿಂದ ಬರಬೇಕಾದ ಹಣ ಮಾತ್ರ ಎಂದು ಹೇಳುತ್ತೀರಿ. ಟೋಟಲ್ ಬಾಕಿಯಲ್ಲಿ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳ ಬಾಕಿ ಹಣವಾದ ೧೧೦ ಕೋಟಿ ರೂಪಾಯಿಗಳನ್ನು ಕಳೆದರೆ ಇನ್ನು ೧೯೦ ಕೋಟಿ ರೂಪಾಯಿಗಳು ಬಾಕಿ ಬರಬೇಕಾಗುತ್ತದೆ ಈ ೧೯೦ ಕೋಟಿ ರೂಪಾಯಿಗಳನ್ನು ಖಾಸಗಿಯವರು ಕೊಡಬೇಕಾಗುತ್ತದೆಂದು ಅರ್ಥವಾಗುತ್ತದೆ. ನಾನು ಹೇಳುವುದಿಷ್ಟೆ, ನಿಮ್ಮ ನಿಗಮಕ್ಕೆ ಲಾಭ ಬರಬೇಕು, ಸರ್ಕಾರಕ್ಕೆ ಲಾಭ ಬರಬೇಕು ೩೦೦ ಕೋಟಿ ರೂಪಾಯಿಯನ್ನು ಯಾರು ಯಾರು ಕೊಡಬೇಕಾಗಿದೆಯೋ ಅವರೆಲ್ಲರೂ ಕೋರ್ಟಿಗೆ ಹೋಗಿದ್ದಾರೆಯೇ ? ಕೋರ್ಟಿಗೆ ಹೋಗಿರುವ ಜನರು ಎಷ್ಟು ಹಣ ಬಾಕಿ ಕೊಡಬೇಕಾಗಿದೆ ? ಕೋರ್ಟಿಗೆ ಹೋಗದೇ ಇರುವ ಜನರಿಂದ ಎಷ್ಟು ಹಣ ಬಾಕಿ ಬರಬೇಕಾಗಿದೆ ? ಅದರ ಲೆಕ್ಕ ಆದರೂ ನಿಮ್ಮ ಹತ್ತಿರ ಇರಬೇಕಲ್ಲಾ, ಅದನ್ನಾದರೂ ಹೇಳಿ. ಭಾಗ್ಯಜ್ಯೋತಿ ಯೋಜನೆಯಿಂದ ವಿದ್ಯುಚ್ಛಕ್ತಿ ಹಾಕಿಕೊಂಡಿರುವವರು ೫ ರೂಪಾಯಿ ಬಾಕಿ ಕೊಡದಿದ್ದರೆ ಅವರಿಗೆ ಡಿಸ್‌ಕನೆಕ್ಟ್ ಮಾಡುತ್ತೀರಿ.

ಅಧ್ಯಕ್ಷರು.—ನೀವು ಪ್ರಶ್ನೆ ಕೇಳುತ್ತೀರೋ ಅಥವಾ ಭಾಷಣ ಮಾಡುತ್ತೀರೋ ?

ಶ್ರೀ ಆರ್. ಎನ್. ನಾಯಕ್.—ನಾನು ಕೇಳುವುದಿಷ್ಟೆ. ೩೦೦ ಕೋಟಿ ರೂಪಾಯಿ ಬಾಕಿ ಉಳಿಸಿ ಕೊಂಡಿರುವವರಿಗೆ ವಿದ್ಯುಚ್ಛಕ್ತಿಯನ್ನು ಡಿಸ್‌ಕನೆಕ್ಟ್ ಮಾಡುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಅದು ಆಗದ ಹೋಗದ ಮಾತು. ಸುಮಾರು ೪ ಲಕ್ಷ ಇಂಡುವಿಜಿಯಲ್ ಕನೆಕ್ಷನೆಗಳು ಇವೆ. ಅವುಗಳನ್ನೆಲ್ಲಾ ಡಿಸ್‌ಕನೆಕ್ಟ್ ಮಾಡುವುದಕ್ಕಾಗುವುದಿಲ್ಲ. ಯಾರು ಕೋರ್ಟಿಗೆ ಹೋಗಿ ತಡೆ ಆಜ್ಞೆಯನ್ನು ತಂದಿದ್ದಾರೋ ಆ ತಡೆ ಆಜ್ಞೆಯಂತೆ ನಾವು ಪರಿಪಾಲಿಸ ಬೇಕಾಗುತ್ತದೆ. ಆ ಮೇಲೆ ನಮ್ಮ ವಕೀಲರು ಏನು ಮಾಡುತ್ತಿದ್ದಾರೆಂದು ಕೇಳಿದ್ದಾರೆ. ತಡೆ ಆಜ್ಞೆಗಳನ್ನು ಎಷ್ಟು ಬೇಗ ತೆರವು ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಬೇಗ ತೆರವು ಮಾಡಿ ಕೇಸ್‌ಗಳನ್ನು ಬೇಗ ಇತ್ಯರ್ಥ ಮಾಡುವ ಕೆಲಸವನ್ನು ವಕೀಲರು ಮಾಡುತ್ತಿದ್ದಾರೆ ಕೋರ್ಟಿನ ಆಜ್ಞೆ

ಗಳನ್ನು ಮಿರುವುದಕ್ಕಾಗುವುದಿಲ್ಲ. ಇನ್ನು ಎರಡನೆಯದು ಭಾಗ್ಯ ಜ್ಯೋತಿ ಯೋಜನೆಯಡಿ ವಿದ್ಯುಚ್ಛಕ್ತಿ ಪಡೆಸಿಕೊಂಡಿರುವವರಿಗೆ ಡಿಸ್‌ಕನೆಕ್ಷನ್ ಮಾಡಲಾಗುತ್ತಿದೆಯೆಂದು ಹೇಳಿದ್ದಾರೆ ಯಾರು ಬಾಕಿ ಇಟ್ಟುಕೊಂಡಿದ್ದಾರೋ ಅವರುಗಳು ತಮ್ಮ ಬಾಕಿ ಹಣವನ್ನು ೧೦ ಕಂತುಗಳಲ್ಲಿ ತೀರಿಸುವುದಕ್ಕೆ ಬಂದರೆ ಅಂಥವರುಗಳಿಗೆ ಡಿಸ್‌ಕನೆಕ್ಷನ್ ಮಾಡಬಾರದೆಂದು ನಾನು ಹೇಳಿದ್ದೇನೆ. ಯಾರು ೧೦ ಕಂತುಗಳಲ್ಲಿ ಹಣವನ್ನು ಪಾವತಿ ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೋ ಅಂಥವರುಗಳಿಗೆ ಡಿಸ್‌ಕನೆಕ್ಷನ್ ಮಾಡಿಲ್ಲ. ಲಕ್ಷಗಟ್ಟಲೇ ಬಾಕಿ ಇಟ್ಟುಕೊಂಡಿರುವವರ ಮೇಲೆ ನಾವು ಎಲೆಕ್ಟ್ರಿಸಿಟಿ ಬೋರ್ಡ್ ಆ್ಯಕ್ಟ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಆರ್. ಎನ್. ನಾಯಕ್.—ಈ ಮೇಲೆ, ನಮ್ಮ ಹೆಚ್ಚಿನವರ ತಾಲ್ಲೂಕಿನಲ್ಲಿ ಕರೆಂಟ್ ಬೇಕೆಂದು ಅರ್ಜಿ ಹಾಕಿಕೊಂಡಿದ್ದು ಇನ್ನೂ ಸರ್ವೀಸ್ ತೆಗೆದುಕೊಳ್ಳದೇ ಇರುವವರಿಗೆಲ್ಲಾ ಕರೆಂಟ್ ಚಾರ್ಜ್‌ನ್ನು ಕಟ್ಟಬೇಕೆಂದು ಬಿಲ್‌ಗಳನ್ನು ಕಳುಹಿಸಿಕೊಟ್ಟಿದ್ದಾರೆ. ಕರೆಂಟ್ ಉಪಯೋಗಿಸದೇ ಇದ್ದರೂ ಚಾರ್ಜ್ ಕಟ್ಟಿ ಎಂದು ಬಿಲ್‌ಗಳನ್ನು ಕಳುಹಿಸುವುದು ಒಂದು ಕಡೆ ಆದರೆ, ಇನ್ನೊಂದು ಕಡೆ ಕರೆಂಟ್ ಉಪಯೋಗಿಸಿಕೊಂಡು ಚಾರ್ಜ್ ಕಟ್ಟದೇ ಇದ್ದವರಿಗೆ ಡಿಸ್‌ಕನೆಕ್ಷನ್ ಕೂಡಾ ಇವರು ಮಾಡುತ್ತಿಲ್ಲ. ರಾಜ್ಯದಲ್ಲಿ ವಿದ್ಯುತ್ ನಿಗಮದ ಕಾನೂನು ಸಾಮಾನ್ಯ ಜನಕ್ಕೇ ಒಂದು ತರಹ ಅಸಮಾನ್ಯ ಜನಕ್ಕೇ ಒಂದು ತರಹ ಇದೆಯೇ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು.—ಭಾಷಣ ಮಾಡುತ್ತೀರೋ, ಅಥವಾ ಪ್ರಶ್ನೆ ಕೇಳುತ್ತೀರೋ ? ನಿಮಗೆ ಏನು ಆಗ ಬೇಕೆಂಬುದನ್ನು ಸರ್ಕಾರಕ್ಕೆ ನೇರವಾಗಿ ಕೇಳಿ.

ಶ್ರೀ ಆರ್. ಎನ್. ನಾಯಕ್.—ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಇಲಾಖೆಯವರು ಮಾಡಿರುವ ಕಾನೂನು ಸಾಮಾನ್ಯ ಜನಕ್ಕೆ ಒಂದು ತರಹ ಅಸಮಾನ್ಯ ಜನಕ್ಕೇ ಒಂದು ತರಹ ಇದೆಯೇ ಅಥವಾ ಒಂದೇ ಇದೆಯೇ ಎಂದು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಇದರ ಬಗ್ಗೆ ಹಲವಾರು ಸಾರಿ ಉತ್ತರ ಹೇಳಿದರೂ ಮಾನ್ಯ ಸದಸ್ಯರು ಕೇಳುತ್ತಲೇ ಇದ್ದಾರೆ. ಮಾನ್ಯ ಅಧ್ಯಕ್ಷರೇ, ಕಾನೂನು ಎಲ್ಲರಿಗೂ ಒಂದೇ ಇದೆ.

ಬಾಗೇಷಪುರ ಪೈಪ್ ಫ್ಯಾಕ್ಟರಿಯಲ್ಲಿನ ಕೊಳವೆಗಳ ಸಂಗ್ರಹ

೨೯೫೧. ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆಗಳ ಮತ್ತು ಗಣಿ ಮತ್ತು ಭೂ ವಿಜ್ಞಾನದ ಇಲಾಖಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರಕಾರಿ ಸ್ವಾಮ್ಯ ಉದ್ದಿಮೆ ಆದ ಬಾಗೇಷಪುರ ಕೊಳವೆ ಕಾರ್ಖಾನೆಯಲ್ಲಿ ಈಗ ಇರುವ ಕೊಳವೆಗಳ ಸಂಗ್ರಹ ಎಷ್ಟು ಹಾಗೂ ಅದರ ಮೌಲ್ಯ ಎಷ್ಟು ?

ಆ) ಎಷ್ಟು ಕಾಲದಿಂದ ಈ ಕೊಳವೆ ಸಂಗ್ರಹ ಮಾರಾಟವಾಗದೆ ಉಳಿದಿದೆ ?

ಇ) ಒಳಚರಂಡಿ ಯೋಜನೆ ಸರ್ಕಾರಿ ಕಟ್ಟಡಗಳ ರಚನೆ, ಕುಡಿಯುವ ನೀರು ಪೂರೈಕೆ ಕಾಮಗಾರಿಗಳಲ್ಲಿ ಈ ಕೊಳವೆಗಳನ್ನು ಉಪಯೋಗವಾಗುವ ಸಾಧ್ಯತೆ ಇದೆಯೇ ?

ಈ) ಈ ಸಂಗ್ರಹವನ್ನು ವಿಲೇವಾರಿ ಮಾಡಲು ಮತ್ತು ಮಾರಾಟ ಮಾಡಲು ಯಾವ ಕ್ರಮ ಕೈಗೊಳ್ಳಲಾಗುವುದು ?